ಓ.ಎಸ್. ನಂಃ **129/2017**
ಪಿ.ಡಬ್ಲ್ಯೂಃ **2**

ದಿನಾಂಕ **07-03-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ: ಶ್ರೀ. ಡಿ ಎಂ ವಕೀಲರಿಂದಃ</u>

ಈ ದಾವೆಯನ್ನು ಶೇಖಮ್ಮ ರವರು ಬುಜ್ಜಮ್ಮ, ಉಷಾಂತಮ್ಮ ಹಾಗೂ ಮಾಯಮ್ಮ ರವರ ವಿರುದ್ಧ ದಾಖಲಿಸಿದ್ದಾರೆ. ಸಾಕ್ಷಿಯು ಮುಂದುವರೆದು ಶೇಖಮ್ಮ ರವರನ್ನು ಪದ್ಮಮ್ಮ ಎಂದು ಸಹ ಕರೆಯುತ್ತಾರೆ ಎಂದುನುಡಿಯುತ್ತಾರೆ. ಯಾವ-ಯಾವ ಆಸ್ತಿಗಳ ಮೇಲೆ ದಾವೆ ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ಮೊದಲು ಗೊತ್ತಿಲ್ಲ ಎಂದು ಹಾಗೂ ಆ ನಂತರ ಹೊಲದ ಮೇಲೆ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾವಾ ಜಮೀನು ಸರ್ವೆ ನಂ.261 ಆಗಿರುತ್ತದೆ. ಅದರ ಹಿಸ್ಸೆ ನಂಬರು ನನಗೆ ಗೊತ್ತಿಲ್ಲ. ಸದರಿ ಜಮೀನು ಕಾಕಲವಾರ ಗ್ರಾಮದಲ್ಲಿ ಇದೆ. ಸದರಿ ಜಮೀನನ್ನು 1 ನೇ ಪ್ರತಿವಾದಿಯ ಮಾವ ಖರೀದಿ ಮಾಡಿದ್ದರು. ಅವರು ತಿಪ್ಪಣ್ಣ ರವರಿಂದ ಖರೀದಿ ಮಾಡಿದ್ದರು. ನರಸಮ್ಮ ರವರಿಗೆ ಒಬ್ಬ ಗಂಡು ಹಾಗೂ ಮೂರು ಜನ ಹೆಣ್ಣು ಮಕ್ಕಳು ಇದ್ದಾರೆ. ದಾವೆ ದಾಖಲಿಸುವ ಸಮಯದಲ್ಲಿ ವಾದಿಯರು ನರಸಮ್ಮ ರವರಿಗೆ ಒಬ್ಬ ಗಂಡು ಹಾಗೂ ಮೂರು ಜನ ಹೆಣ್ಣು ಮಕ್ಕಳಿದ್ದಾರೆ ಎಂದು ಬರೆಸಿದ್ದರೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ.

2. ಚಪೇಟ್ಲಾ ಗ್ರಾಮದಲ್ಲಿ ವಾದಿಯರು ಹಾಗೂ 1 ನೇ ಪ್ರತಿವಾದಿ ಕುಟುಂಬಕ್ಕೆ ಸೇರಿದ ಮನೆ ಇದೆ ಎಂದರೆ ಸರಿ. ನಿಮ್ಮ ಪ್ರಮಾಣಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಾಗೂ ಅವರ ಮಗ ನರಸಪ್ಪ ಇಬ್ಬರು ಅನಾರೋಗ್ಯದಿಂದ ತೀರಿಕೊಂಡಿದ್ದಾರೆ ಎಂದರೆ ಸರಿ. ಸದರಿಯವರ ಅಸ್ಪತ್ರೆ ಖರ್ಚಿಗಾಗಿ ಪ್ರತಿವಾದಿ ನಂ.1(ಎ) ಬುಜ್ಜಮ್ಮ ರವರು ಸಾಲ ಮಾಡಿರುತ್ತಾರೆ ಎಂದರೆ ಸರಿ. ಮನೆಯಲ್ಲಿ ಎಲ್ಲಾ ಚೆನ್ನಾಗಿದ್ದರು 2 ನೇ ವಾದಿ 1 ನೇ ವಾದಿಯನ್ನು ಕರೆದುಕೊಂಡು ವಿನಾಕಾರಣ ಮನೆ ಬಿಟ್ಟು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 2 ನೇ ವಾದಿ ಪ್ರತಿವಾದಿ ನಂ.1(ಎ ರಿಂದ ಸಿ) ರವರ 09

ತೊಲೆ ಬಂಗಾರನ್ನು ತೆಗೆದುಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ. ಆಸ್ಪತ್ರೆಯ ಚಿಕಿತ್ಸೆಗೆ ಖರ್ಚಾದ ಹಣ ಹಾಗೂ ಸದರಿ ಬಂಗಾರನ್ನು ಕೇಳಿದಾಗ ವಾದಿಯರು ಈ ಸುಳ್ಳು ದಾವೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ